**ದಿನಾಂಕಃ 08.01.2021 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ಮಾಡಿಸಲಾಯಿತು.**

**ಪಾಟೀ ಸವಾಲುಃ ಆರೋಪಿಯವರ ಪರ ವಕೀಲರಿಂದ.**

1. 2017 ರಿಂದ ನಾನು ಪಿರ್ಯಾದಿದಾರರ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿದ್ದೇನೆ. 2016 ರ ಕರಾರು ಆದ ಸಮಯದಲ್ಲಿ ನಾನು ಪಿರ್ಯಾದಿದಾರರ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿರಲಿಲ್ಲ. ನಾನು ಮೆಸಸ್. ನಂದಿತ ಸೇಲ್ಸ್ ನ ಅಕೌಂಟ್‌ನ್ನು ವೈಯಕ್ತಿಕವಾಗಿ ನೋಡಿಕೊಳ್ಳುತ್ತಿಲ್ಲ. ಪಿರ್ಯಾದಿದಾರರ ಸಂಸ್ಥೆಯಿಂದ ಈ ಪ್ರಕರಣದ ಬಗ್ಗೆ ಪ್ರತಿನಿಧಿಸಲು ಮಾತ್ರ ಅನುಮತಿ ನೀಡಿರುತ್ತಾರೆ. ಆರೋಪಿಯವರ ವ್ಯವಹಾರದ ಖಾತೆಯ ಬಗ್ಗೆ ಏನು ವ್ಯವಹಾರಗಳು ಆಗಿರುತ್ತದೆ ನನಗೆ ವೃಯಕ್ತಿಕ ಮಾಹಿತಿ ಇಲ್ಲ. ಆದರೆ ದಾಖಲೆಗಳ ಆಧಾರದಲ್ಲಿ ಹೇಳಬಹುದು.

2. ಕರಾರಿನ ಪ್ರಕಾರ ನಾವು ವಸ್ತುಗಳನ್ನು ಆರೋಪಿಯವರಿಗೆ ಸಪ್ಲೈ ಮಾಡಿದ ತಕ್ಷಣವೇ ಅವರು ನಮಗೆ ಹಣವನ್ನು ಕೊಡಬೇಕಾಗಿತ್ತು. 2016 ರಲ್ಲಿ ನಾವು ಮೊದಲ ಬಾರಿಗೆ ಆರೋಪಿಯವರಿಗೆ ವಸ್ತುಗಳನ್ನು ಸಪ್ಲೈ ಮಾಡಿದಾಗ ಅವರು ಅದರ ಮೊತ್ತವನ್ನು ನಮಗೆ ಪಾವತಿ ಮಾಡಿರುತ್ತಾರೆ. ಆರೋಪಿಯವರು ಇನ್ವಾಯ್ಸ್ ನ ಮೊತ್ತವನ್ನು ಮಾತ್ರ ಪಾವತಿಸುತ್ತಿದ್ದರೋ ಅಥವಾ ಎಲ್ಲಾ ಇನ್ವಾಯ್ಸ್ ಗಳ ಮೊತ್ತ ಒಟ್ಟಾಗಿ ನೀಡುತ್ತಿದ್ದರೋ ನನಗೆ ಗೊತ್ತಿಲ್ಲ. ಆರೋಪಿಯವರ ಸಂಸ್ಥೆ ಕೇವಲ ಡಿಸ್ಟ್ರಿಬ್ಯೂಟರ್ ಆಗಿದ್ದರು ಎಂದರೆ ಸರಿ. ಆರೋಪಿಯವರು ವಸ್ತುಗಳನ್ನು ಉಳಿದ ರೀಟೈಲರ್ ರವರಿಗೆ ನೀಡಬೇಕಾಗಿತ್ತು ಎಂದರೆ ಸರಿ. ಆರೋಪಿಯವರು ರೀಟೈಲರ್ ರವರಿಂದ ಹಣವನ್ನು ಪಡೆದ ನಂತರ ನಮಗೆ ಹಣ ನೀಡಬೇಕಾಗಿತ್ತು ಎಂದರೆ ಸರಿಯಲ್ಲ. ನಮ್ಮಿಂದ ಪಡೆದ ವಸ್ತುಗಳಿಗೆ ಆರೋಪಿಯವರು ನಮಗೆ ಹಣವನ್ನು ನೀಡಬೇಕಾಗಿತ್ತು.

3. ಆರೋಪಿಯವರು ಎಷ್ಟು ಚೆಕ್ ಗಳನ್ನು ನೀಡಿರುತ್ತಾರೆ ನನಗೆ ಗೊತ್ತಿಲ್ಲ. ವಿವಾದಿತ ಚೆಕ್ ಗಳಲ್ಲಿ ಕೆಲವು ಚೆಕ್ ಗಳನ್ನು ಭದ್ರತೆಗಾಗಿ ಆರೋಪಿಯವರು ನೀಡಿರಬಹುದು. ವಿವಾದಿತ ಚೆಕ್ ಗಳಲ್ಲಿ ಮೊತ್ತಗಳನ್ನು ಭರ್ತಿ ಮಾಡಿದ್ದರೋ ಅಥವಾ ಖಾಲಿ ಇತ್ತೋ ನನಗೆ ಗೊತ್ತಿಲ್ಲ. ಸಾಕ್ಷಿಯು ಪಿರ್ಯಾದಿದಾರರ ಸಂಸ್ಥೆಯವರಿಗೆ ಆರೋಪಿಯರು ನೀಡಿದ ಚೆಕ್ ನ್ನು ಹಾಜರುಪಡಿಸುವ ಅಧಿಕಾರವನ್ನು ಹೊಂದಿದ್ದರು ಎಂದು ಹೇಳುತ್ತಾರೆ. ಆರೋಪಿಯವರು ನೀಡಿದ ಚೆಕ್ ಗಳನ್ನು ಪಿರ್ಯಾದಿದಾರರ ಸಂಸ್ಥೆಯವರು ಹಾಜರುಪಡಿಸಬಹುದು ಎನ್ನುವ ಅಧಿಕಾರವನ್ನು ಕರಾರಿನ ಕ್ಲಾಸ್-ಸಿ ಯಲ್ಲಿ ತಿಳಿಸಲಾಗಿದೆ. ಆರೋಪಿಯವರು ಯಾವಾಗ ನಮಗೆ ಹಣ ಕೊಡುವುದನ್ನು ನಿಲ್ಲಿಸಿದ್ದರು ಸ್ಟೇಟ್‌ಮೆಂಟ್ ಆಫ್ ಅಕೌಂಟ್ ನೋಡದೆ ಹೇಳಲು ಆಗುವುದಿಲ್ಲ. ಸದರಿ ಸ್ಟೇಟ್‌ಮೆಂಟ್ ಆಫ್ ಅಕೌಂಟ್ ಹಾಜರುಪಡಿಸಿರುವುದಿಲ್ಲ.

4. ಪಿರ್ಯಾದಿದಾರು ಆರೋಪಿಯವರಿಗೆ ವಸ್ತುಗಳನ್ನು ಕೆಲವೊಂದು ರೀಟೈಲರ್ ರವರಿಗೆ ಮಾತ್ರ ಸಪ್ಲೈ ಮಾಡಿ ಎಂದು ತಿಳಿಸಿರುವುದಿಲ್ಲ ವಿಜಯ್ ಗೌತಮ್ ಎನ್ನುವವರು ಆರೋಪಿಯವರಿಗೆ ಮಾರ್ಕೆಟಿಂಗ್ ವ್ಯವಹಾರವನ್ನು ನೋಡಿಕೊಳ್ಳುತ್ತಿದ್ದ ಬಗ್ಗೆ ನನಗೆ ಗೊತ್ತಿಲ್ಲ. ವಿಜಯ್ ಗೌತಮ್ ರವರು ಆರೋಪಿಯವರಿಗೆ ಸಂಬಂಧಿಸಿದ ಅಕೌಂಟ್ಸ್ ನ್ನು ನೋಡಿಕೊಳ್ಳುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ವಿಜಯ್ ಗೌತಮ್ ರವರು ಆರೋಪಿಯವರಿಗೆ 9-10 ರೀಟೈಲರ್ ಮಾತ್ರ ವಸ್ತುಗಳನ್ನು ಸಪ್ಲೈ ಮಾಡಿ ಎಂದು ತಿಳಿಸಿದ್ದರು ಎಂದರೆ ನನಗೆ ಗೊತ್ತಿಲ್ಲ

5. ಆರೋಪಿಯವರಿಗೆ ನಮ್ಮ ಸಂಸ್ಥೆಯಿಂದ ಇನ್ವಾಯ್ಸ್ ಗಳ ಮೊತ್ತವನ್ನು ಪಾವತಿಸಿ ಎಂದು ನೋಟೀಸನ್ನು ನೀಡಿರುತ್ತೇವೆ. ಸದರಿ ನೋಟೀಸನ್ನು ಹಾಜರುಪಡಿಸಿರುವ ಬಗ್ಗೆ ನನಗೆ ಗೊತ್ತಿಲ್ಲ. ಸಾಕ್ಷಿಯ ನೋಟೀಸನ್ನು ನೀಡಿದ ನಂತರ ವಿವಾದಿತ ಚೆಕ್ ನ್ನು ಆರೋಪಿಯವರು ನಮಗೆ ನೀಡಿರುತ್ತಾರೆ ಎನ್ನುತ್ತಾರೆ. ಆರೋಪಿಯವರು ನೀಡಿದ ರೂ.5,00,000/- ಬ್ಯಾಂಕ್ ಗ್ಯಾರಂಟಿ ಮೊತ್ತವನ್ನು ನಾವು ಪಡೆದ ಬಗ್ಗೆ ದಾಖಲೆ ನೋಡದೆ ಹೇಳಲು ಆಗುವುದಿಲ್ಲ. ಆರೋಪಿಯವರು ಭದ್ರತೆಗಾಗಿ ನೀಡಿದ ವಿವಾದಿತ ಚೆಕ್ ಗಳನ್ನು ದುರುಪಯೋಗ ಪಡಿಸಿಕೊಂಡಿರುತ್ತೇವೆ ಎಂದರೆ

ಸರಿಯಲ್ಲ. ಆರೋಪಿಯವರ ಸಂಸ್ಥೆಯಲ್ಲಿ ಎಷ್ಟು ಮೊತ್ತದ ವಸ್ತುಗಳು ಇರುತ್ತದೆ ನನಗೆ ಗೊತ್ತಿಲ್ಲ. ವಿವಾದಿತ ಚೆಕ್ ಗಳನ್ನು ನೀಡಿದ ನಂತರ ಆರೋಪಿಯವರ ಸಂಸ್ಥೆಯಲ್ಲಿದ್ದ ಸ್ಟಾಕ್‌ಗಳನ್ನು ನಾವು ಪಡೆದುಕೊಂಡಿರುತ್ತೇವೆ ಎಂದರೆ ಸರಿಯಲ್ಲ. ರೂ.42,91,428/- ಮೊತ್ತದ ಸ್ಟಾಕ್‌ನ್ನು ನಾವು ದಿಃ 10.06.2019 ರಂದು ಆರೋಪಿಯವರಿಂದ ಪಡೆದುಕೊಡಿರುತ್ತೇವೆ ಎಂದರೆ ಸಾಕ್ಷಿಯು ದಾಖಲೆ ನೋಡದೆ ಹೇಳಲು ಆಗುವುದಿಲ್ಲ ಎನ್ನುತ್ತಾರೆ. ರೂ.2,2,657/- ಮೊತ್ತದ ವಸ್ತುಗಳು ಮಾತ್ರ ಆರೋಪಿಯವರ ಸಂಸ್ಥೆಯಲ್ಲಿ ಇರುತ್ತದೆ ಎಂದರೆ ಸಾಕ್ಷಿಯ ದಾಖಲೆ ನೋಡದೆ ಹೇಳಲು ಆಗುವುದಿಲ್ಲ ಎನ್ನುತ್ತಾರೆ.

6. ವಿವಾದಿತ ಚೆಕ್ ಗಳನ್ನು ಬ್ಯಾಂಕ್‌ಗೆ ಹಾಜರುಪಡಿಸುವ ಪೂರ್ವದಲ್ಲಿ ಅದರ ಬಗ್ಗೆ ನಾವು ಆರೋಪಿಯವರಿಗೆ ತಿಳಿಸಿರಬಹುದು. ನಾವು ಬರವಣಿಗೆಯ ಮೂಲಕ ತಿಳಿಸಿರುತ್ತೇವೋ ಇಲ್ಲವೋ ದಾಖಲೆಗಳನ್ನು ನೋಡಬೇಕು. ಕರಾರಿನ ಪ್ರಕಾರ ಆರೋಪಿಯವರಿಗೆ ವಿವಾದಿತ ಚೆಕ್‌ನ್ನು ಬ್ಯಾಂಕ್‌ಗೆ ಹಾಜರುಪಡಿಸುವ ಪೂರ್ವದಲ್ಲಿ ಮಾಹಿತಿ ನೀಡಿರಬೇಕು ಎನ್ನುವ ಬಗ್ಗೆ ಇರುವುದಿಲ್ಲ ಎಂದರೆ ಸರಿಯಲ್ಲ. ದಿಃ 03.05.2017 ರಂದು ಆರೋಪಿಯವರು ನಮ್ಮ ಸಂಸ್ಥೆಗೆ ಮೇಲ್‌ನ್ನು ಕಳಿಸಿರಲಿಲ್ಲ ಎಂದರೆ ನನಗೆ ಮಾಹಿತಿ ಇಲ್ಲ. ರೂ.29,85,791/- ಮೊತ್ತದ ಹಣವನ್ನು ಆರೋಪಿಯವರಿಗೆ ರೀಟೈಲರ್ ರವರು ಹಣವನ್ನು ಪಾವತಿ ಮಾಡಬೇಕಾದ ಬಗ್ಗೆ ಪಿರ್ಯಾದಿದಾರರಿಗೆ ಮಾಹಿತಿ ಇತ್ತು ಎಂದರೆ ಸರಿಯಲ್ಲ. ಆರೋಪಿಯವರಿಂದ ಬರಬೇಕಾದ ಹಣವನ್ನು ಅವರಿಂದ ಸ್ಟಾಕ್‌ನ್ನು ಹಿಂದಕ್ಕೆ ನಾವು ಪಡೆದುಕೊಂಡಿದ್ದು, ಆ ಕಾರಣದಿಂದ ಆರೋಪಿಯವರು ನಮಗೆ ಯಾವುದೇ ಹಣ ಕೊಡಲು ಬಾಕಿ ಇರುವುದಿಲ್ಲ ಎಂದರೆ ಸಾಕ್ಷಿಯು ಸ್ಟೇಟ್ ಮೆಂಟ್ ಆಫ್ ಅಕೌಂಟ್ ನೋಡದೇ ಹೇಳಲು ಆಗುವುದಿಲ್ಲ ಎನ್ನುತ್ತಾರೆ. ಆರೋಪಿಯವರು ವಿವಾದಿತ ಚೆಕ್ ಗಳನ್ನು ನಮಗೆ ಬರಬೇಕಾದ ಬಾಕಿ ಮೊತ್ತಕ್ಕೆ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಭದ್ರತೆಗಾಗಿ ನೀಡಿದ ವಿವಾದಿತ ಚೆಕ್ ಗಳನ್ನು ನಾವು ದುರುಪಯೋಗ ಪಡಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಒ ಹೇ ಕೇ ಸ ಇದೆ

(ವಾಣಿ ಎ. ಶೆಟ್ಟಿ)
17 ನೇ ಅಪರ ನ್ಯಾಯಾಧೀಶರು ಮತ್ತು
ಮತ್ತು ಎ.ಸಿ.ಎಂ.ಎಂ.